info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ನವೆಂಬರ್ 2024
ಸಂಪುಟ 20 ಸಂಚಿಕೆ 11

ಸಂಚಿಕೆ ಬೆಲೆ ರೂ. 1/–






ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–ಕನ್ನಡ ರಾಜ್ಯೋತ್ಸವ ಆಚರಣೆ

ಸಂಪೂರ್ಣ ವರ್ಣರಂಜಿತ ಮುದ್ರಣದೊಂದಿಗೆ ಸ್ನೇಹ ಚಿಂತನೆ

ಬಂಟ ಮಹಿಳೆಯರ ಸಾಮಾಜಿಕ ಪ್ರಾತಿನಿಧ್ಯ ಮತ್ತು ಸವಾಲುಗಳು

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road,
Vijayanagar, Bengaluru - 560040. Karnataka.
Phone : 080-23399323 | 23399636
Email : info@buntsanghablr.com



# ಶ್ರೀ ಕುಳೂರು ಕನ್ಯಾನ ಸದಾಶಿವ್ ಶೆಟ್ಟಿ

ಮಾನ್ಯರು ಕಾಸರಗೋಡು ಜಿಲ್ಲೆ ಕನ್ಯಾನದ ಕುಲೀನ ಬಂಟ ಮನೆತನದ ಮೂಲದವರಾಗಿದ್ದು,
ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದುಕೊಂಡು ಉದ್ಯೋಗಾರ್ತಿಯಾಗಿ ಮುಂಬೈ ಸೇರಿದವರು,
ಹೆಸರಾಂತ ಸಂಸ್ಥೆಗಳಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದ ಉದ್ಯೋಗ ನಿರ್ವಹಿಸಿ ಕ್ರಮೇಣ ಶ್ರದ್ಧೆ ಮತ್ತು ನಿಯತ್ತಿನೊಂದಿಗೆ
ತನ್ನ ಸ್ವಂತ ಉದ್ದಿಮೆ ಸ್ಥಾಪಿಸಲು ಮುಂದಾಗಿ ಹೇರಂಬ ಇಂಡಸ್ಟ್ರೀಸ್, ಮತ್ತು ಕೆಮಿನೋ ಫಾರ್ಮ ಲಿಮಿಟೆಡ್ ಎಂಬ
ದೇಶಾದ್ಯಂತ ಹೆಸರುವಾಸಿಯಾದ ಬೃಹತ್ ಸಂಸ್ಥೆಗಳನ್ನು ಸ್ಥಾಪಿಸಿದರು.

ಸುಮಾರು ೩೦೦೦ ಜನರಿಗೆ ಉದ್ಯೋಗವಕಾಶ ನೀಡಿ ಅವರ ಜೀವನಕ್ಕೆ ಆಧಾರ ಸ್ತಂಭವಾಗಿರುತ್ತಾರೆ.
ಸಂಪತ್ತು ಕೂಡಿಸಿಕೊಳ್ಳುವುದೇ ತಮ್ಮ ಕೈಂಕರ್ಯವಲ್ಲ ಎಂಬುವುದನ್ನು ಮನಗೊಂಡು ದೀನದಲಿತರ ಸೇವೆಯೇ
ತಮ್ಮ ಜೀವನದ ಗುರಿ ಎಂದು ಅರಿತು ಅಶಕ್ತರು ಮತ್ತು ಜನಸಾಮಾನ್ಯರಿಗೆ ತಮ್ಮ ದುಡಿಮೆಯ ಒಂದಂಶವನ್ನು ದಾನ ಮಾಡಿದವರು,
ತಮ್ಮ ತವರು ಜಿಲ್ಲೆಯಲ್ಲಿ ದೇವಸ್ಥಾನ, ದೈವಸ್ಥಾನ, ಶಾಲಾ-ಕಾಲೇಜುಗಳಿಗೆ ದೇಣಿಗೆ ಮತ್ತು ಬಡ ರೋಗಿಗಳ ಚಿಕಿತ್ಸಾ ವೆಚ್ಚ ಮತ್ತು ವಿಶ್ವ ಬಂಟರ ಸಂಘ,
ಯಕ್ಷಧ್ರುವ ಪಟ್ಲ ಇಂತಹ ಸಾಮಾಜಿಕ ಕಳಕಳಿಯುಳ್ಳ ಸಂಸ್ಥೆಗಳಿಗೆ ಮಹಾದಾನಿಗಳಾಗಿ ಜೊತೆಯಾದವರು.

ಅವರ ಈ ಹತ್ತು ಹಲವು ಸಾಮಾಜಿಕ ಚಟುವಟಿಕೆಗಳನ್ನು ಗುರುತಿಸಿ ಕರ್ನಾಟಕ ಘನ ಸರಕಾರವು
ದಿನಾಂಕ 01/11/2024 ರಂದು ವಿಧಾನಸೌಧದಲ್ಲಿ ಕರ್ನಾಟಕ ರಾಜ್ಯೋತ್ಸವ ಸಂದರ್ಭದಂದು
"ಕರ್ನಾಟಕ-50 ಸುವರ್ಣ ಮಹೋತ್ಸವ" ಪ್ರಶಸ್ತಿಯನ್ನು ಮುಖ್ಯಮಂತ್ರಿಗಳ ಮುಖೇನ ಮಾನ್ಯ ಮಾಡಿರುತ್ತಾರೆ.
ಇಂತಹ ನಿಮ್ಮ ಈ ಸಾಧನೆಗಳಿಗಾಗಿ ಈಗಾಗಲೇ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದಿರುವ ನಿಮಗೆ ಗಡಿನಾಡ ಕನ್ನಡಿಗರಾಗಿ ಪಡೆದಿರುವ
ಈ ಪ್ರಶಸ್ತಿಯು ಅರ್ಹವಾಗಿಯೂ ಅಭಿನಂದನರ್ಹವಾಗಿಯೂ ಆಗಿರುತ್ತದೆ

**‘ಕರ್ನಾಟಕ -50 ಸುವರ್ಣ ಮಹೋತ್ಸವ’’ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ನಿಮ್ಮನ್ನು ಮನಪೂರ್ವಕವಾಗಿ,
ತುಂಬು ಹೃದಯದಿಂದ ಈ ಮೂಲಕ ಅಭಿನಂದಿಸುತ್ತೇವೆ.**

ಶ್ರೀಮತಿ ಜಯಶ್ರೀ ಮತ್ತು ಶ್ರೀ ಗುರು ಹೆಗ್ಡೆ.
ಮಾಣಿಕ್ ಹೆಗ್ಡೆ, ಭಗತ್ ಹೆಗ್ಡೆ.

PANCHARANGI FILMS

"ಪಂಚರಂಗಿ ಫಿಲಂಸ್" ಚಿತ್ರತಂಡದ
ನಿರ್ದೇಶಕರು, ಕಲಾವಿದರು, ತಂತ್ರಜ್ಞರು
ಹಾಗೂ ಎಲ್ಲಾ ಸಿಬ್ಬಂದಿ ವರ್ಗ.

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

VOL 20 NOVEMBER - 2024 ISSUE 11

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಯಕ್ಷ ಬಂಡಿಗೆ ಬಂಟರ ಕೊಂಡಿ, ಹೆಣ್ಣನ್ನೇ ನಾಚಿಸುವ ಹೆನ್ನಾಬೈಲು ಸಂಜೀವ ಶೆಟ್ಟಿ ಮುಖ್ಯ ಸ್ತ್ರೀ ಪಾತ್ರಧಾರಿ | 5 |
| ಸಾಹಿತ್ಯ ಮತ್ತು ಪ್ರಕಾಶನ ಸಮಿತಿ, ಮುದ್ದು ಕಂದ – ಮಕ್ಕಳ ಫೋಟೋ ಸ್ಪರ್ಧೆ | 7 |
| Awards For Excellence | 8 |
| ಸಾಂಸ್ಕೃತಿಕ ವಿಭಾಗ, ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ | 11 |
| ಕ್ರೀಡಾ ವಿಭಾಗ | 14 |
| Bunts Sangha R.N.S. Vidyaniketan, Report On National Yoga Championship -2024 | 21 |
| ಮಹಿಳಾ ವಿಭಾಗ, ದಸರಾ ಆಚರಣೆ | 22 |
| ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ ಸಹೃದಯ ಸಮಾಜ ಬಾಂಧವರಲ್ಲಿ ವಿನಂತಿ | 24 |
| ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 25 |
| Bunts Sangha R.N.S. Vidyaniketan & Composite P.U. College, Report of Annual Athletic Meet -2024-25 | 27 |

### ಮುಖ ಪುಟ

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – ಕನ್ನಡ ರಾಜ್ಯೋತ್ಸವ ಆಚರಣೆ

ಸಂಪೂರ್ಣ ವರ್ಣರಂಜಿತ ಮುದ್ರಣದೊಂದಿಗೆ ಸ್ನೇಹ ಚಿಂತನೆ
ಬಂಟ ಮಹಿಳೆಯರ ಸಾಮಾಜಿಕ ಪ್ರಾತಿನಿಧ್ಯ ಮತ್ತು ಸವಾಲುಗಳು

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



## ಬಂಟ ಮಹಿಳೆಯರ ಸಾಮಾಜಿಕ ಪ್ರಾತಿನಿಧ್ಯ ಮತ್ತು ಸವಾಲುಗಳು

ಶತಮಾನಗಳ ಕಾಲದಿಂದಲೂ ಕನ್ನಡ ನಾಡಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಆವರಣ ಬಂಟ ಸಮುದಾಯಕ್ಕೆ ದೊಡ್ಡ ಸಂಖ್ಯೆಯಲ್ಲಿ ಆಶ್ರಯ ನೀಡಿದ ತಾಣ. ಇಲ್ಲಿನ ಬಂಟರು ಸಾಮಾಜಿಕವಾಗಿ ಮತ್ತು ಸಂಖ್ಯೆಯ ದೃಷ್ಟಿಯಿಂದ ಒಂದು ಪ್ರಬಲ ಸಮುದಾಯವಾಗಿ ಗುರುತಿಸಿಕೊಂಡಿದ್ದಾರೆ. ನಮ್ಮ ಬಂಟ ಸಮುದಾಯದ ಸಮಗ್ರ ಏಳ್ಗೆ ಮತ್ತು ಪ್ರಗತಿಯ ಹಿಂದೆ ಮಹಿಳೆಯ ಕೊಡುಗೆ ಅನನ್ಯವಾದುದು. ಬಂಟ ಮಹಿಳೆಯರು ಸಮುದಾಯದ ಘನತೆ, ಸ್ಥಾನಮಾನಗಳ ಆಧಾರಸ್ಥಂಭ ಎಂದರೆ ತಪ್ಪಾಗಲಾರದು. ನಾಡಿನ ಮೂಲೆ ಮೂಲೆಗಳಲ್ಲಿ ಬದುಕನ್ನು ಕಟ್ಟಿಕೊಂಡಿರುವ ಬಂಟ ಮಹಿಳೆಯರು ತಮ್ಮ ಸಂಪ್ರದಾಯ ಹಾಗೂ ತಾವು ನೆಲೆಸಿರುವ ಪರಿಸರದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತಿಗತಿಗಳಿಗೆ ಅನುಸಾರವಾಗಿ ನೆಲೆ ಕಂಡುಕೊಂಡಿದ್ದಾರೆ. ಹಾಗೆಯೇ ತಾವು ವಾಸಿಸುತ್ತಿರುವ ಪರಿಸರದ ಇತರ ಸಮುದಾಯಗಳೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿದ್ದು ಸ್ಥಳೀಯ ಭೂಗಣಿ, ಗುತ್ತು, ಬೀಡುಗಳ ಮಟ್ಟದಲ್ಲಿ ಹಿರಿಯರಾಗಿ ಗುರುತಿಸಿಕೊಂಡಿದ್ದಾರೆ. ಇಂದಿಗೂ ಸಹ ನಾಡಿನ ವಿವಿದೆಡೆಗಳಲ್ಲಿ ಪಾರಂಪರಿಕವಾದ ಮತ್ತು ಪ್ರತಿಷ್ಠಿತ ಬಂಟರ ಮನೆ, ಮನೆತನಗಳಿವೆ.

ಬಂಟ ಸಮುದಾಯ ಬಲು ಹಿಂದಿನ ಕಾಲದಿಂದಲೂ ಮಹಿಳೆಯರಿಗೆ ಕೌಟುಂಬಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತ ಸ್ಥಾನವನ್ನು ನೀಡುತ್ತಾ ಬಂದಿದೆ. ಕೌಟುಂಬಿಕವಾಗಿ ಅನೇಕ ತೆರನಾದ ನಿರ್ಧಾರಗಳನ್ನು ಕೈಗೊಳ್ಳುವ ಹಂತದಲ್ಲಿ ಬಂಟ ಮಹಿಳೆಯರಿಗೂ ಸಮಾನವಾದ ಸ್ಥಾನವಿತ್ತು ಎಂಬುದನ್ನು ಅನೇಕ ಚಾರಿತ್ರಿಕ ಸಂಗತಿಗಳು ದಾಖಲಿಸುತ್ತ ಬಂದಿವೆ. ಬಂಟ ಕುಟುಂಬಗಳಲ್ಲಿನ ಅನೇಕ ಮಹಿಳೆಯರು ಮಹತ್ವದ ಸಂದರ್ಭಗಳಲ್ಲಿ ತಮ್ಮ ನಿಲುವನ್ನು ವ್ಯಕ್ತಪಡಿಸಲು ಎಲ್ಲಿಯೂ ಹಿಂಜರಿಯುತ್ತಿರಲಿಲ್ಲ. ಮಕ್ಕಳ ಲಾಲನೆ-ಪಾಲನೆ, ಶಿಕ್ಷಣ, ವೃತ್ತಿ, ವಿವಾಹ ಇತ್ಯಾದಿ ಸಂದರ್ಭಗಳಲ್ಲಿ ಚರ್ಚೆ ನಡೆಯುವಾಗ ಮಹಿಳೆಯರು ಸಹ ಸಮಾನವಾಗಿ ಭಾಗಿಯಾಗುತ್ತಿದ್ದರು. ಹೀಗೆ ಬಂಟರ ಸಾಮುದಾಯಿಕ ಹಿರಿಮೆ ವೈಭವಗಳಿಗೆ ಬಂಟ ಮಹಿಳೆಯರ ಪಾತ್ರವೂ ದೊಡ್ಡದು.

ಆದರೆ ಇದರ ಇನ್ನೊಂದು ಮುಖವನ್ನು ಸಹ ಈ ಸಂದರ್ಭದಲ್ಲಿ ಗಮನಿಸಿಕೊಳ್ಳಬೇಕು. ಮೇಲೆ ತಿಳಿಸಿದ ಎಲ್ಲಾ ಬಗೆಯ ವೈಭವ-ಹಿರಿತನ-ಪ್ರತಿಷ್ಠೆಗಳ ನಡುವೆಯೂ ಬಂಟ ಸಮುದಾಯದೊಳಗೆ ಒಂದು ನೆಲೆಯ ವರ್ಗ ಸಂಘರ್ಷ ಇದ್ದೇ ಇದೆ. ಇದು ಇಡೀ ಸಮುದಾಯಕ್ಕೆ ಮುಜುಗರ ಮತ್ತು ಆತಂಕಗಳನ್ನು ಹುಟ್ಟಿಸುವ ಸಂಗತಿಯೂ ಹೌದು. ಇತರ ಪ್ರಬಲ ಸಮುದಾಯಗಳಲ್ಲಿ ಸಹ ಇಂಥದ್ದನ್ನು ಕಾಣಬಹುದಾದರೂ ಬಂಟ ಸಮುದಾಯದೊಳಗೆ ಗುರುತಿಸಬಹುದಾದ ವರ್ಗ ಸಂಘರ್ಷದ ಸ್ವರೂಪ ತೀವ್ರತರವಾದುದು. ಅನೇಕ ಹಳ್ಳಿಗಳಿಗೆ ಹೋದರೆ ವಸ್ತುಸ್ಥಿತಿಯ ನೈಜತೆ ದಟ್ಟವಾಗಿ ಅರಿವಿಗೆ ಬರುತ್ತದೆ. ಆಧುನಿಕತೆಯ ವ್ಯಾಪಕ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳನ್ನು ಆವರಿಸಿಕೊಂಡಿರುವ ಇಂದಿನ ದಿನಗಳಲ್ಲಿಯು ಬಂಟ ಸಮುದಾಯವನ್ನು ಪ್ರತಿನಿಧಿಸುವ ಅನೇಕ ಮಹಿಳೆಯರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂಬುದು ವಿಪರ್ಯಾಸವೇ ಸರಿ. ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಹೊಂದಿರುವ ನಡುವೆಯೂ ಉನ್ನತ ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿನಿಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಬಡವರ ಮನೆಯ ಹೆಣ್ಣುಮಕ್ಕಳ ವಿವಾಹದ ನಿರ್ವಹಣೆ ತೀವ್ರ ಸ್ವರೂಪದ ಸವಾಲಾಗಿ ಪರಿಣಮಿಸಿದೆ. ಬಂಟರ ಹಿರಿಮೆ-ವೈಭವ-ಪರಂಪರೆಗಳ ಕುರಿತು ಸಂಭ್ರಮಪಡುವ ಈ ಸಂದರ್ಭದಲ್ಲಿ ಈ ಸಂಗತಿಗಳ ಕಡೆಗೆ ಅಷ್ಟೇ ಗಂಭೀರವಾಗಿ ಯೋಚಿಸುವ ಮತ್ತು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಅಗತ್ಯವಿದೆ.

ಬೆಂಗಳೂರಿನ ಬಂಟರ ಸಂಘದಲ್ಲಿ ಮಹಿಳಾ ವಿಭಾಗ ಆರಂಭಗೊಂಡದ್ದು 1992ರಲ್ಲಿ. ಈ ಮಹಿಳಾ ವಿಭಾಗ ಈಗಾಗಲೇ ವಿಭಿನ್ನ ಚಟುವಟಿಕೆಗಳನ್ನು ನಿರ್ವಹಿಸುತ್ತ 33 ಸಂವತ್ಸರಗಳನ್ನು ಪೂರೈಸಿದೆ. ಮಹಿಳಾ ವಿಭಾಗವು ಬೆಳೆದು ಬಂದ ರೀತಿ, ಹಮ್ಮಿಕೊಂಡ ಕಾರ್ಯಕ್ರಮಗಳು, ನಿರ್ವಹಿಸಿದ ಪ್ರಗತಿಯೇ ಅದರ ಯಶಸ್ಸಿನ ಬಿಂಬ ಎಂಬ ಭಾವನೆ ನನ್ನದು. ನಮ್ಮ ಬಂಟರ ಸಂಘದಲ್ಲಿ ಮಹಿಳಾ ವಿಭಾಗವನ್ನು ಹುಟ್ಟುಹಾಕಿ ಅದರ ಪ್ರಥಮ ಅಧ್ಯಕ್ಷರಾಗಿ ಮತ್ತು ಬೆಂಗಳೂರು ಬಂಟರ ಸಂಘದ ಏಕೈಕ ಮಹಿಳಾ ಅಧ್ಯಕ್ಷರಾಗಿದ್ದ ದಿ. ಸುಶೀಲಾ ಪಿ. ಶೆಟ್ಟಿ ಅವರ ಕಾರ್ಯಕ್ಷಮತೆಯನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು. ಮಹಿಳಾ ವಿಭಾಗ ರೂಪುಗೊಂಡ ಆರಂಭದ ದಿನಗಳಲ್ಲಿ ತಮ್ಮ ಮುಂದಿದ್ದ ಜ್ವಲಂತ ಸವಾಲುಗಳನ್ನು ದಿ. ಸುಶೀಲಾ ಪಿ. ಶೆಟ್ಟಿ ಮತ್ತು ಅವರ ತಂಡ ನಿರ್ವಹಿಸಿದ ಬಗೆ ಅಪೂರ್ವವಾದುದು. ಅವರು ಹಾಕಿಕೊಟ್ಟ ಭದ್ರ ಬುನಾದಿಯೊಂದಿಗೆ ಮುಂದಿನ ಎಲ್ಲಾ ಅಧ್ಯಕ್ಷರು ಮತ್ತು ಸಮಿತಿಗಳು ಅತ್ಯಂತ ಸಮರ್ಥವಾಗಿ ಕೆಲಸ ಮಾಡಿವೆ. ಇವೆಲ್ಲವೂ ಇಂದು ನಮಗೆ ಅನುಸರಣಯೋಗ್ಯವಾಗಿ ಪರಿಣಮಿಸಿವೆ.

ಸ್ನೇಹಚಿಂತನೆ ಸಂಚಿಕೆಯು ಇದೀಗ ಪೂರ್ಣ ಪ್ರಮಾಣದಲ್ಲಿ ವರ್ಣರಂಜಿತ ಸ್ವರೂಪದೊಂದಿಗೆ ಆಕರ್ಷಕವಾಗಿ ನಿಮ್ಮ ಕೈ ಸೇರುತ್ತಿದೆ. ಮುಂದಿನ ದಿನಗಳಲ್ಲಿ ಈ ಸಂಚಿಕೆಯನ್ನು ಇನ್ನಷ್ಟು ಓದುಗಸ್ನೇಹಿಯಾಗಿ ಸಂರಚಿಸಬೇಕೆಂಬ ಕಳಕಳ ನಮ್ಮದು.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**



# ಅಧ್ಯಕ್ಷರ ಮಾತು

## ಹೊಂಗನಸಿನ ಭವಿಷ್ಯದ ಕಡೆಗೆ ಭರವಸೆಯ ಹೊಸ ನೋಟ

ಮೊದಲು ತಾಯ ಹಾಲ ಕುಡಿದು
ನಲ್ಮೆಯಿಂದ ತೊದಲು ನುಡಿದು
ಗೆಳೆಯರೊಡನೆ ಬೆಳೆದು ಬಂದ ಮಾತದಾವುದು

ಮುಗಿಲೆತ್ತರಕ್ಕೆ ಹಾರಿದರೂ, ಕಡಲಾಳಕ್ಕೆ ಇಳಿದರೂ ಕೊನೆಗೆ ಗೂಡಿನ ಗುರುತ್ವಾಕರ್ಷಣೆಗೆ ಒಳಗಾಗಲೇಬೇಕು. ಗೂಡು ಅಮ್ಮನಂತೆ ಪೊರೆದರೆ, ಗೂಡಿನ ಗುರುತು ತಾಯ್ನುಡಿಯಾಗಿರುತ್ತದೆ.

ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ನಾಡಿನಾದ್ಯಂತ ಆಚರಿಸಲಾಯಿತು. ಇದು 69ನೇ ರಾಜ್ಯೋತ್ಸವದ ಆಚರಣೆಯಾಗಿದ್ದು, ಮಾತೃ ಭಾಷೆಯಾದ ಕನ್ನಡದ ಸಾಂಸ್ಕೃತಿಕ ಪರಂಪರೆ, ಹಿನ್ನೆಲೆ, ಮಹತ್ವವನ್ನು ಅರಿತು ಗೌರವಿಸುವುದು ಹಾಗೂ ಕನ್ನಡ ನಾಡು ನುಡಿಯನ್ನು ಉಳಿಸಿ, ಬೆಳೆಸುವುದರೊಂದಿಗೆ ಕನ್ನಡ ಸಾಹಿತ್ಯವನ್ನು ಹೆಚ್ಚು ಹೆಚ್ಚು ಓದುವುದರೊಂದಿಗೆ, ಪೋಷಿಸುವುದು ಈ ಮೂಲಕ ಕನ್ನಡ ಸಾಹಿತಿಗಳನ್ನು ಉತ್ತೇಜಿಸುವುದು ನಮ್ಮ ಕರ್ತವ್ಯ.

ಸಮಾಜದ ಏಳಿಗೆಗೆ ವಿದ್ಯಾದಾನವು ಶ್ರೇಷ್ಠವಾಗಿದೆ. ಸಮಾಜದ ಸಬಲೀಕರಣಕ್ಕಾಗಿ ಪ್ರತಿಯೊಬ್ಬರೂ ಸಹಯೋಗ ನೀಡಿ ಸಮಾಜದ ಋಣವನ್ನು ಮುಕ್ತಿಗೊಳಿಸುವ ಹಿರಿದಾಸೆಯಿಂದ ವಿದ್ಯಾಪ್ರಸಾರದ ಪ್ರೋತ್ಸಾಹಕ್ಕಾಗಿ ನಮ್ಮ ಸಂಘದ ವತಿಯಿಂದ ಸರ್ವರೂ ತೊಡಗಿಸಿಕೊಂಡಿದ್ದೇವೆ.

ಕದಿಯಲಾರದ ಸಂಪತ್ತಾದ ವಿದ್ಯಾದಾನವನ್ನು ಪ್ರೋತ್ಸಾಹಿಸುವ ಮಹದಾಪೇಕ್ಷೆಯಿಂದ ನಾವು ಹಳ್ಳಿ ಪಟ್ಟಣಗಳ ಬೇಧವಿಲ್ಲದೆ ದೀಪಾವಳಿಯ ಶುಭಾವಸರದಲ್ಲಿ ಬೆಂಗಳೂರು ಮಾತ್ರವಲ್ಲದೆ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ವಿದ್ಯಾರ್ಥಿ ವೇತನವನ್ನು ಹಂಚಿದ್ದೇವೆ.

ವಿದ್ಯೆಯು ವ್ಯಕ್ತಿಯ ಮನಸ್ಸು, ಆಲೋಚನೆ, ಜೀವನ ದಾರಿಯನ್ನು ಪರಿವರ್ತನೆಗೊಳಿಸುವ ಶಕ್ತಿಯಾಗಿದೆ. ವಿದ್ಯಾಪ್ರಸಾರವು ಒಂದೆಡೆ ವ್ಯಕ್ತಿಗಳಲ್ಲಿ ಜ್ಞಾನವನ್ನು ಹಂಚುವ ಕಾರ್ಯವನ್ನು ಮಾಡುತ್ತಿದ್ದರೆ, ಮತ್ತೊಂದೆಡೆ ಸಮಾಜದಲ್ಲಿ ಸಂಸ್ಕಾರ, ನೈತಿಕತೆ, ಜವಾಬ್ದಾರಿ ಮತ್ತು ಸಮಾನತೆಯನ್ನು ಬೆಳೆಸಲು ಸಹಕಾರಿಯಾಗಿದೆ. ವಿದ್ಯಾಪ್ರಸಾರವು ವ್ಯಕ್ತಿ ಹಾಗೂ ಸಮಾಜದ ಮುಂದಾಳತ್ವಕ್ಕಾಗಿ ಪ್ರಮುಖ ಪಾತ್ರ ವಹಿಸುತ್ತದೆ.

ಇಂದಿನ ಮಕ್ಕಳು ನಾಳಿನ ಭಾರತವನ್ನು ನಿರ್ಮಿಸುತ್ತಾರೆ. ಸರಿಯಾದ ಶಿಕ್ಷಣವನ್ನು ನೀಡುವುದರಿಂದ ಉತ್ತಮ ಸಮಾಜದ ನಿರ್ಮಾಣ ಸಾಧ್ಯ. ಇದು ಉಜ್ವಲ ಭವಿಷ್ಯಕ್ಕೆ ನಾಂದಿ. ಮಕ್ಕಳ ದಿನಾಚರಣೆಯ ಶುಭಾಶಯಗಳು.

ಈ ಮಾಸದಿಂದ ಸ್ನೇಹ ಚಿಂತನೆ ಮಾಸ ಪತ್ರಿಕೆಯು ವರ್ಣರಂಜಿತವಾಗಿ ಮೂಡಿಬರುತ್ತಿರುವುದಕ್ಕೆ ಶುಭಹಾರೈಕೆ.

ಇಂತಿ ತಮ್ಮ ಪ್ರೀತಿಯ
**ಸಿಎ. ಅಶೋಕ್ ಶೆಟ್ಟಿ ಎಂ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಯವರ ವರದಿ

## ವರ್ಣರಂಜಿತವಾಗಿ ಮೂಡಿ ಬರಲಿರುವ ಸ್ನೇಹಚಿಂತನೆ



ಪಂಡಿತ್ ಜವಹಾರ್‌ಲಾಲ್ ನೆಹರು ಅವರ ಜನ್ಮದಿನವಾದ ನವೆಂಬರ್ 14ರಂದು ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ. ನವೆಂಬರ್ 14ರಂದು ಮಕ್ಕಳ ದಿನಾಚರಣೆ ಮಾಡುವ ಮೂಲಕ ಅವರ ಹಕ್ಕುಗಳು, ಆರೈಕೆ ಮತ್ತು ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮೂಲ ಉದ್ದೇಶವಾಗಿದೆ.

ನಮ್ಮ ಸಂಘದ ಸದಸ್ಯರ ಮಕ್ಕಳಿಗಾಗಿ ಮುದ್ದು ಕಂದ ಫೋಟೋ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, 10 ವರ್ಷದ ಒಳಗಿನ ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ದಿನಾಂಕ 20.10.2024ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ– II, ಯಲಚಗುಪ್ಪೆ ಆವರಣದಲ್ಲಿ ಕ್ರೀಡಾ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ಅಥ್ಲೆಟಿಕ್ ಕ್ರೀಡಾ ಕೂಟವನ್ನು ಮಳೆಯ ಕಾರಣದಿಂದ ದಿನಾಂಕ 17.11.2024ಕ್ಕೆ ಮುಂದೂಡಲಾಗಿದೆ. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರೀಡಾ ಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ಸಾಂಸ್ಕೃತಿಕ ಸಮಿತಿಯ ವತಿಯಿಂದ ದಿನಾಂಕ 14.12.2024 ರಂದು ರಂಗೋಲಿ, ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ದಿನಾಂಕ 15.12.2024ರಂದು ಛದ್ಮವೇಷ, ಆಶುಭಾಷಣ ಮತ್ತು ಸಂಗೀತ ಸ್ಪರ್ಧೆಗಳು ಸಂಘದ ಆವರಣದಲ್ಲಿ ನಡೆಯಲಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಕ್ಟೋಬರ್ 2 ರಿಂದ ಅಕ್ಟೋಬರ್ 5 ರವರೆಗೆ ಜಮ್‌ಶೆಡ್ ಪುರದ ದಯಾನಂದ ಪಬ್ಲಿಕ್ ಸ್ಕೂಲ್‌ನಲ್ಲಿ ಸಿ.ಐ.ಎಸ್.ಸಿ.ಇ ಗೇಮ್ಸ್ ಮತ್ತು ಸ್ಪೋರ್ಟ್ಸ್ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಯೋಗ ಚಾಂಪಿಯನ್‌ಶಿಪ್ 2024ರಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಹುಡುಗರ ತಂಡವು ಕಂಚಿನ ಪದಕವನ್ನು ಪಡೆದುಕೊಂಡಿದೆ. ಭಾಗವಹಿಸಿದ ಹಾಗೂ ಪ್ರಶಸ್ತಿಯನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಅಭಿನಂದನೆಗಳು.

ದಿನಾಂಕ 29.10.2024 ಮತ್ತು 30.10.2024ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾ ಕೂಟವನ್ನು ಜ್ಞಾನ ಭಾರತಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ರಾಷ್ಟ್ರೀಯ ಮಟ್ಟದ ಕಬಡ್ಡಿ ಕ್ರೀಡಾಪಟು ಶ್ರೀ ರೋಹಿತ್ ಮಾರ್ಲರವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕ್ರೀಡಾ ಸ್ಪರ್ಧೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ವಿಶೇಷ ಮಾಹಿತಿಯೊಂದಿಗೆ ಈ ಮಾಸದಿಂದ ನಮ್ಮ ಸ್ನೇಹಚಿಂತನೆ ಪತ್ರಿಕೆಯ ಪ್ರತೀ ಪುಟವೂ ವರ್ಣರಂಜಿತವಾಗಿ ಪ್ರಕಟಗೊಳ್ಳುತ್ತದೆ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ಯಕ್ಷ ಬಂಡಿಗೆ ಬಂಟರ ಕೊಂಡಿ



ಹೆಚ್. ಶ್ರೀಧರ ಹೆಗ್ಡೆ

## ಹೆಣ್ಣನ್ನೇ ನಾಚಿಸುವ ಹೆನ್ನಾಬೈಲು ಸಂಜೀವ ಶೆಟ್ಟಿ ಮುಖ್ಯ ಸ್ತ್ರೀ ಪಾತ್ರಧಾರಿ

ಯಕ್ಷಗಾನದಲ್ಲಿ ಸ್ತ್ರೀಪಾತ್ರ ನಿರ್ವಹಣೆಗೆ ನವರಸಭರಿತ ಕುಣಿತ, ನಡೆ, ಸ್ವರ, ಅರ್ಥಗಾರಿಕೆ, ವನಪು, ವಯ್ಯಾರ, ರೂಪ, ಆಳಂಗವೇ ಮುಂತಾದ ಗುಣಮಟ್ಟದ ಅಗತ್ಯತೆ ಅನಿವಾರ್ಯ. ಸ್ತ್ರೀ ಪಾತ್ರಧಾರಿಗಳಾಗಿ ಯಕ್ಷ ಕ್ಷೇತ್ರದಲ್ಲಿ ಮಿಂಚಿದ ಬಂಟರು ಬೆರಳೆಣಿಕೆಯಷ್ಟೇ ಎಂದರೆ ತಪ್ಪಾಗಲಾರದು. ದಿ॥ ನೀಲಾವರ ಮಹಾಬಲ ಶೆಟ್ಟಿ, ಹೊಸಂಗಡಿ ರಾಜೀವ ಶೆಟ್ಟಿಯಂಥ ಮೇರು ಕಲಾವಿದರ ನಂತರ ಪ್ರಸಕ್ತ ಚಲಾವಣೆಯಲ್ಲಿರುವವರಲ್ಲಿ ಹೆನ್ನಾಬೈಲು ಸಂಜೀವ ಶೆಟ್ಟಿ, ಹಕ್ಲಾಡಿ ರವೀಂದ್ರ ಶೆಟ್ಟಿಯಂಥವರು ಯಕ್ಷ ಪ್ರಿಯರ ಪ್ರೀತಿಗೆ ಪಾತ್ರರು.

ಮೊದಲಿಗೆ ಹೆನ್ನಾಬೈಲು ಸಂಜೀವ ಶೆಟ್ಟಿಯವರ ಯಕ್ಷ ಪಯಣದ ಕುರಿತು ಸಂಕ್ಷಿಪ್ತ ಲೇಖನ ಪ್ರಕಟಿಸಲು ಹೆಮ್ಮೆಯಾಗುತ್ತಿದೆ.

ಅಖಿಲ ಭಾರತದಲ್ಲಿ ಯಕ್ಷಗಾನಕ್ಕೆ ತವರುಮನೆ ಅಂದರೆ ಕರ್ನಾಟಕ ಕರಾವಳಿ, ಉತ್ತರ ಕನ್ನಡ ಮತ್ತು ಮಲೆನಾಡು ಜಿಲ್ಲೆಗಳು, ದಕ್ಷಿಣ ಕನ್ನಡ ಹಾಗೂ ಉಡುಪಿ ಮತ್ತು ಶಿವಮೊಗ್ಗ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೆನ್ನಾಬೈಲು ಗ್ರಾಮದಲ್ಲಿ ಶ್ರೀಯುತ ಅಂತಯ್ಯ ಶೆಟ್ಟಿ ಮತ್ತು ಶ್ರೀಮತಿ ಪಾರ್ವತಿ ಶೆಟ್ಟಿರವರ ಮಗನಾಗಿ 19.06.1972ರಲ್ಲಿ ಜನಿಸಿದ್ದ ಶ್ರೀ ಸಂಜೀವ ಶೆಟ್ಟಿಯವರು ವಿದ್ಯಾಭ್ಯಾಸವನ್ನು 4ನೇ ತರಗತಿಯಲ್ಲಿರುವಾಗಲೇ ವಿದಾಯ ಹೇಳಿ ಯಕ್ಷಗಾನಕ್ಕೆ ಮನಸೋತು ಪ್ರಸಿದ್ಧ ಕಲಾವಿದರಾದ ಆರ್ಗೋಡು ಮೋಹನ್ ದಾಸ್ ಶೆಣೈಯವರು ಯಕ್ಷಗಾನದ ಗುರುಗಳಾಗಿ ಅತೀ ಸಣ್ಣ ವಯಸ್ಸಿನಲ್ಲಿ ಯಕ್ಷಗಾನದ ಗೀಳಿನಿಂದಾಗಿ ಗೋಪಾಲ ಬಾಲನಿಂದ ಆರಂಭಿಸಿ ಸತತ ಪ್ರಯತ್ನದಿಂದ



ಉತ್ತಮ ಹಿರಿಯ ನಟರಾಗಿ ಬೆಳೆದಿದ್ದಾರೆ, ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ನಟಿಸಿ ಜಯಶೀಲರಾಗಿದ್ದಾರೆ.

ಪ್ರಪ್ರಥಮವಾಗಿ ಹಾಲಾಡಿ ಮೇಳದ ಆಟದಲ್ಲಿ ಗೆಜ್ಜೆಕಟ್ಟಿ ಆವತ್ತಿನಿಂದಲೇ ಯಕ್ಷಗಾನ ತಿರುಗಾಟಕ್ಕೆ ಸೇರ್ಪಡೆಯಾಗಿದ್ದಾರೆ. ಅಲ್ಲಿನಿಂದ ಯಕ್ಷಗಾನ ವೃತ್ತಿ ಮುಂದುವರಿದು, ಕಮಲಶಿಲೆ ಮೇಳ, ಮಂದಾರ್ತಿ ಮೇಳ, ಸೌಕೂರು ಮೇಳ, ಪೆರ್ಡೂರು ಮೇಳ. ಪ್ರಸ್ತುತ ಮಾರಣಕಟ್ಟೆ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸತತವಾಗಿ 37 ವರ್ಷದ ಕಲಾಸೇವೆ ಅವಿಸ್ಮರಣೀಯ, ಆಕರ್ಷಣೀಯ, ಅಭಿನಂದನೀಯ.

ಯಕ್ಷಗಾನ ಕ್ಷೇತ್ರದಲ್ಲಿ ಮಾಡಿದ ಪಾತ್ರಗಳು ಕೋಡಂಗಿಯಿಂದ ಬಾಲಗೋಪಾಲ, ಪೀಠಿಕಾ ಸ್ತ್ರೀ ವೇಷ, ಒಡ್ಡೋಲಗ, ಅಭಿಮನ್ಯು, ಕೃಷ್ಣ, ಚಂದ್ರಹಾಸ, ಮಹಿಷಾಸುರ, ಸುದನ್ವ, ಬಬ್ರುವಾಹನ, ಹನುಮಂತ ಮತ್ತು ಪ್ರಮುಖವಾಗಿ ಸ್ತ್ರೀ ಪಾತ್ರಗಳಲ್ಲಿ ದೇವಿ ಮಹಾತ್ಮೆಯ ಶ್ರೀದೇವಿ, ಅಂಬೆ, ಮದನಾಕ್ಷಿ, ಚಿತ್ರಾಂಗದೆ, ಪ್ರಮೀಳೆ, ದಮಯಂತಿ, ದಾಕ್ಷಾಯಿಣಿ, ಸಾವಿತ್ರಿ, ಚಂದ್ರಾವಳಿ, ಪ್ರಭಾವತಿ, ಸುಭದ್ರೆ, ದ್ರೌಪದೆ, ಶಶಿಪ್ರಭೆ ಮುಂತಾದ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಜನಾಕರ್ಷಿತರಾಗಿರುವರು.

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ.
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ
ಬಂಟರ ಸಂಘ ಬೆಂಗಳೂರು

ಅರ್ಗೋಡು ಮೋಹನ್ ದಾಸ್ ಶೆಣೈ, ರಾಜ್ಯ ಪ್ರಶಸ್ತಿ ವಿಜೇತ ಎಂ.ಎ. ನಾಯ್ಕ್, ಆರಾಟೆ ಮಂಜುನಾಥ, ಕೋಡಿ ವಿಶ್ವನಾಥ, ಬೇಳಂಜೆ ಸುಂದರ ನಾಯ್ಕ್, ಥಂಡಿಮನೆ ಶ್ರೀಪಾದ್ ಭಟ್, ರಾಘವೇಂದ್ರ ಆಚಾರ್ಯ, ಮರಿಯಪ್ಪ ಆಚಾರ್ಯ, ಕೋಟ ಸುರೇಶ, ಐರ್‌ಬೈಲು ಆನಂದ ಶೆಟ್ಟಿ, ಕೊಳಲಿ ಕೃಷ್ಣ ಶೆಟ್ಟಿ ಹಾಗೂ ಇನ್ನೂ ಅನೇಕ ಹಿರಿಯ, ಕಿರಿಯ ಸುಪ್ರಸಿದ್ಧ ಕಲಾವಿದರ ಜೊತೆ ತಿರುಗಾಟ ಮಾಡಿದ ಅನುಭವಿ ಸ್ತ್ರೀ ಪಾತ್ರಧಾರಿ.

**ಸಂದ ಪ್ರಶಸ್ತಿ ಪುರಸ್ಕಾರಗಳು:**

01. ಕರಾವಳಿ ಮೈತ್ರಿ ಸಂಘ ಹೈದರಾಬಾದ್ ಇವರಿಂದ ಯಕ್ಷಗಾನ ಮಿನುಗುತಾರೆ ಬಿರುದು.
02. ಕಲ್ಕೂರ ಪ್ರಶಸ್ತಿ–ಕಲ್ಕೂರ ಪ್ರತಿಷ್ಠಾನ ಮಂಗಳೂರು ಇವರಿಂದ
03. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಂದ ಸನ್ಮಾನ
04. ಡಾ॥ ಎಚ್. ಶಾಂತಾರಾಮ್ ಪ್ರಶಸ್ತಿ
05. ಕೊಲ್ಲೂರು ವೈಭವ ಪ್ರಶಸ್ತಿ
06. ಬಂಟರ ಸಂಘ ಬೈಂದೂರು ಸನ್ಮಾನ
07. ಬಂಟರ ಸಂಘ ಬ್ರಹ್ಮಾವರ ಸನ್ಮಾನ

ಹಾಗೂ ಇನ್ನೂ ಅನೇಕ ಪ್ರಶಸ್ತಿ ಸನ್ಮಾನಗಳು ದೊರೆತಿವೆ.

ಪ್ರಧಾನ ಸ್ತ್ರೀ ಪಾತ್ರದಾರಿ ಹೆನ್ನಾಬೈಲು ಸಂಜೀವ ಶೆಟ್ಟಿಯವರ ಧರ್ಮಪತ್ನಿ ಶ್ರೀಮತಿ ಕುಸುಮ ಹಾಗೂ ಪ್ರಶಾಂತ್, ಪ್ರದೀಪ್, ಪ್ರಥ್ವಿರಾಜ್, ಮೂವರು ಸುಪುತ್ರರೊಂದಿಗಿನ ಸಂತೃಪ್ತ ಜೀವನವನ್ನು ಸಾಗಿಸುತ್ತಿರುವ ಈ ಉದಯೋನ್ಮುಖ ಕಲಾವಿದರಿಗೆ ಯಕ್ಷ ಮಾತೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಹಾರೈಸೋಣ.

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು

ಶ್ರೀ ಸಂತೋಷ್ ಶೆಟ್ಟಿ ಜೆ.
ಪ್ರಥಮ ಉಪಾಧ್ಯಕ್ಷರು
ಬಂಟರ ಸಂಘ ಬೆಂಗಳೂರು

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು

ಶ್ರೀಮತಿ ಕಾಂತಿ ಶೆಟ್ಟಿ
ದ್ವಿತೀಯ ಉಪಾಧ್ಯಕ್ಷರು
ಬಂಟರ ಸಂಘ ಬೆಂಗಳೂರು

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು

ಶ್ರೀಮತಿ ಜಯಶ್ರೀ ಸಿ ರೈ
ಜಂಟಿ ಕಾರ್ಯದರ್ಶಿ,
ಬಂಟರ ಸಂಘ ಬೆಂಗಳೂರು

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು

ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್.
ಖಜಾಂಚಿ, ಬಂಟರ ಸಂಘ ಬೆಂಗಳೂರು

### ಬಂಟರ ಸಂಘ ಬೆಂಗಳೂರು, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ

# ಮುದ್ದು ಕಂದ – ಮಕ್ಕಳ ಫೋಟೋ ಸ್ಪರ್ಧೆ

ಬೆಂಗಳೂರು ಬಂಟರ ಸಂಘದ ಸಾಹಿತ್ಯ ಮತ್ತು ಪ್ರಕಾಶನ ಸಮಿತಿ ವತಿಯಿಂದ ಸದಸ್ಯರ ಮಕ್ಕಳಿಗೆ ಫೋಟೋ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

- **ವಯೋಮಿತಿ**
  1 ವರ್ಷದ ಒಳಗೆ
  1 ರಿಂದ 5 ವರ್ಷದ ಒಳಗೆ
  5 ರಿಂದ 10 ವರ್ಷದ ಒಳಗೆ
- ಮಕ್ಕಳ ಸಹಜ, ಆಕರ್ಷಕ ಭಂಗಿಯ (16x12 ಸೆ.ಮೀ) ಕಲರ್ ಫೋಟೋಗಳನ್ನು ಕಳುಹಿಸಿ. (ಮಗುವಿನ ಒಂದು ಭಾವಚಿತ್ರವನ್ನು ಕಳಿಸತಕ್ಕದ್ದು)
- ಫೋಟೋಗಳ ಜೊತೆ ಮಗುವಿನ ಹೆಸರು, ತಂದೆ-ತಾಯಿಯ ಹೆಸರು, ಸದಸ್ಯತ್ವ ಸಂಖ್ಯೆ, ವಿಳಾಸಗಳೊಂದಿಗೆ ಜನನ ಪ್ರಮಾಣ ಪತ್ರದ ಪ್ರತಿಯನ್ನು ಕಳುಹಿಸಿ. ನಿಗದಿತ ಅಳತೆಯಲ್ಲಿ ಇಲ್ಲದ ಮತ್ತು ಪೂರ್ಣ ವಿವರಗಳಿಲ್ಲದ ಫೋಟೋಗಳನ್ನು ತಿರಸ್ಕರಿಸಲಾಗುವುದು.
- ಫೋಟೋಗಳನ್ನು ಕಳುಹಿಸಲು ಕೊನೆಯ ದಿನಾಂಕ: 30.11.2024
- ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು ಮತ್ತು ಫೋಟೋಗಳನ್ನು 'ಸ್ನೇಹ ಚಿಂತನೆ' ಯಲ್ಲಿ ಪ್ರಕಟಿಸಲಾಗುವುದು.
- ಸ್ಪರ್ಧೆಯ ಫಲಿತಾಂಶದ ಒಂದು ವಾರದ ಬಳಿಕ ಫೋಟೋಗಳನ್ನು ಹಿಂಪಡೆಯಬಹುದು.
- ಸಂಪಾದಕ ಮಂಡಳಿ ತೀರ್ಮಾನವೇ ಅಂತಿಮ.

ಲಕೋಟೆ ಮೇಲೆ ಮಕ್ಕಳ ಫೋಟೋ ಸ್ಪರ್ಧೆ ಎಂದು ಬರೆದು ಇವರಿಗೆ ಕಳುಹಿಸಿ:

**ಅಧ್ಯಕ್ಷರು, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ, ಬಂಟರ ಸಂಘ, ಬೆಂಗಳೂರು. ನಂ. 324, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು-560040**

ಪ್ರಿಯರೇ,

ಸ್ನೇಹ ಚಿಂತನೆ ಮಾಸ ಪತ್ರಿಕೆ ವರ್ಣರಂಜಿತವಾಗಿ ಮೂಡಿಬರಲಿದ್ದು ತಮ್ಮ ಮದುವೆ ಶುಭಾಶಯಗಳು, ಹುಟ್ಟು ಹಬ್ಬದ ಶುಭಾಶಯಗಳು, ಪುಣ್ಯ ಸ್ಮರಣೆ, ಅಭಿನಂದನೆಗಳು, ಹೊಸ ಉದ್ಯೋಗ ಪ್ರಾರಂಭದ ಬಗ್ಗೆ, ವಿಶೇಷ ದಿನಗಳು, ಉತ್ಪನ್ನಗಳ ಬಗ್ಗೆ ಹಾಗೂ ಯಾವುದೇ ವಿಧವಾದ ಜಾಹೀರಾತನ್ನು ನೀಡುವ ಮೂಲಕ ಅತೀ ಹೆಚ್ಚಿನ ಜನರಿಗೆ ತಲುಪುವ ಸಂಪರ್ಕ ಸೇತುವೆಯಾಗಿ ಬಳಸಿಕೊಳ್ಳಿ.

ಜಾಹೀರಾತು ನೀಡಲು ಇಚ್ಛಿಸುವವರು ಸಂಘದ ಕಛೇರಿಯನ್ನು ಸಂಪರ್ಕಿಸಬಹುದು. ಜಾಹೀರಾತನ್ನು ಪ್ರತೀ ತಿಂಗಳ 30ನೇ ತಾರೀಕಿನ ಒಳಗಾಗಿ ನೀಡಬೇಕಾಗಿ ವಿನಂತಿ.

ದೂರವಾಣಿ ಸಂಖ್ಯೆ: 080-23399323/ 7022119739

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
ಚೇರ್‌ಪರ್ಸನ್, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಅಜಿತ್ ವಿ. ಶೆಟ್ಟಿ
ಚೇರ್‌ಪರ್ಸನ್, ಯುವ ವಿಭಾಗ
ಬಂಟರ ಸಂಘ ಬೆಂಗಳೂರು

## BUNTS SANGHA BANGALORE

# AWARDS FOR EXELLENCE

**Following awards for the year 2024-25 available to achievers of excellence in various fields as described below:**

1. Mr. C.L Naik Memorial Award for the **Best Outgoing Engineering Student.**
2. Dr. K.K Hegde Memorial Award for the **Best Outgoing Medical Student.**
3. Mr. M. Sunder Ram Shetty Memorial Award for the **Best Outgoing Commerce Student.**
4. Mrs. AmmanniRamanna Shetty Memorial Award for the **Best All round Girl Student.**
5. Mr. CharmakkiNarayana Shetty Award for the **Best outgoing Law Student**.
6. Mrs. Akkayya N. Shetty Award for the **Best Outgoing Dental Student.**
7. Mr. K.P Ramanna Shetty Award for the **Best B.Sc (Ag)/ P.U.C (Science) Student.**
8. Mr. H.T Bhandary Award for the **Best Student in Sports.**
9. Mr. P.S Thimmappa Shetty Memorial Award for **Any Achievement for Excellence.**
10. Ms. Sheetal Krishnappa Memorial Award for a **Girl showing All-round Excellence.**
11. Master Jayasheel G. Shetty Memorial Award for the **Outstanding Student in B.E (Electronics) or any other branch of Engineering.**
12. Miss. Raksha Rai Memorial Award for **Excellence in Classical Music.**
13. Mullad Lakshmi Sheenappa Shetty Award for the **Best outgoing student in Veterinary Science.**
14. Smt. Kenjooru Nayakara Mane Doddakka Ananth Shetty Memorial Award for the **Best Outgoing Female Medical Student.**
15. Sri. Maralimane Ananth Shetty Memorial Award for the **Best Outgoing Ophthalmologist" or any other Post Graduation in Medicine.**
16. Miss. Raksha M Shetty Memorial Award for **Excellence in Classical Dance**.
17. Sri. Mohandas N Hegde Memorial Awards for **Best Outgoing Law Student**.
18. Sri. NiddodiPremdas Shetty Memorial Award for **All-round Excellence Boy Rural Student.**
19. Kolkebail Nadumane Shrimathi Vanajakshi Karunakar Shetty Memorial Award for **All-round Excellence Girl Student.**

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಪ್ರಶಾಂತ್ ಶೆಟ್ಟಿ ಎಸ್.
ಚೇರ್‌ಪರ್ಸನ್, ವೈದ್ಯಕೀಯ ಮತ್ತು ವಿಮೆ ವಿಭಾಗ
ಬಂಟರ ಸಂಘ ಬೆಂಗಳೂರು

20. Vandar Thenkabettu Balakrishna Shetty Memorial Award for Highest Scoring Girl in **Bachelor of Commerce and pursuing Higher Studies.**

21. 'Dr K Nagappa Alva & Smt. Kalyani Alva memorial award' for **Academic Excellence in the field of Science, Commerce & Arts.**

22. 'Dr K Nagappa Alva & Smt. Kalyani Alva memorial award' for **Excellence in the field of Cultural (Art, Music, Dance, Yakshagana, Drama etc.).**

23. 'Dr K Nagappa Alva & Smt. Kalyani Alva memorial award' for **Excellence in the field of Sports, Yoga**.

24. 'Mr. Kishan Jaladhar Shetty Award for **'Best outgoing Management Student' or any other Excellence.**

25. Ladies Wing Rajatha Sambrama Memorial Award' for **highest scoring girl in SSLC/10th Standard.**

26. Ladies Wing Rajatha Sambrama Memorial Award' in highest scoring girls in **II PUC/12th standard.**

27. Late Sooda Sanjiva Shetty and Late Sarojini Sanjiva Shetty Memorial cash award for **economically backward meritorious student pursuing PUC, Degree or any other professional course (3 Awards).**

28. Late Shakthish Shetty Memorial Excellence Award for **highest scoring girl student in PUC (4 Awards).**

29. Late K. S Harshavardhan Shetty Memorial Endowment Award for **meritorious student pursuing PUC, Degree or any other professional course** who has lost their father **(2 Awards).**

30. Brahmavara Tenkumane Late Dr. B. Raghava Shetty memorial Award for **Economically backward meritorious Bunt student pursuing Medical Education**.

Candidates eligible and desirous, who have completed their course during the current year may apply along with their personal details, attested copy of the marks card, recent photograph, **Bank account Passbook copy or Cancelled chequecopy**(compulsory)and telephone number, so as to reach the Sangha office on or before 31.12.2024. Selected candidates who attend the Founder's Day Celebration on 26.01.2025 will be honored with Award and cash prize.

**Vijay J. Shetty Halady**
Hon. Secretary

**CA. Ashok Shetty M.**
President

**Sudhakar Shetty Hattiangadi**
Convenor

Scholarship & Awards
Committee

**Umesh Kumar Shetty**
Chairman

**Office Bearers, Executive Committee Members and Scholarship & Awards Committee members**

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಪ್ರತಾಪ್ ಶೆಟ್ಟಿ
ಚೇರ್‌ಪರ್ಸನ್, ಸೇವಾದಳ,
ಬಂಟರ ಸಂಘ ಬೆಂಗಳೂರು

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Chord Road, Vijayanagar, Bangalore – 560 040
**Tel. : 080-23399323/ 23399635/ 23399636**

## Application for Endowment Award
## ದತ್ತಿ ನಿಧಿ ಪ್ರಶಸ್ತಿಗೆ ಅರ್ಜಿ

To,

The Hon. Secretary
Bunt's Sangha Bangalore

**Sir/ ಮಾನ್ಯರೇ,**

IWe request you to consider my application for EndowmentAward/ ದತ್ತಿ ನಿಧಿ ಪ್ರಶಸ್ತಿಗೆ ನನ್ನಅರ್ಜಿಯನ್ನು ಪರಿಗಣಿಸಲು ಮನವಿ.

| | | |
|---|---|---|
| Name of the Applicant | | |
| Date of Birth of the Applicant | | |
| Contact No. | | |
| Father Name | | |
| Mother Name | | |
| Address | | |
| Details of Education qualification of Applicant: | | |
| Name of the Award applied for: | | |
| Achievements: | | |
| Deatails of Applicants Bank A/c / ಅಭ್ಯರ್ಥಿಯ ಬ್ಯಾಂಕ್‌ಖಾತೆಯ ವಿವರಗಳು | A/c Holders Name / ಖಾತೆದಾರರ ಹೆಸರು | |
| | A/c No. ಖಾತೆ ಸಂಖ್ಯೆ | |
| | Name of the Bank ಬ್ಯಾಂಕ್ ನ ಹೆಸರು | |
| | Branch/ ಶಾಖೆ | |
| | IFSC Code / ಐ.ಇಫ್.ಎಸ್.ಸಿ. ಕೋಡ್ | |

Signature of Applicant

**For office use**

ಅಭ್ಯರ್ಥಿಯ ಸಹಿ/–

Date:

**Umesh Kumar Shetty**
**Chairman,**
Scholarship & Awards Committee

## ಬಂಟರ ಸಂಘ ಬೆಂಗಳೂರು – ಸಾಂಸ್ಕೃತಿಕ ವಿಭಾಗ

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ

## 2024–25

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 14.12.2024, ಶನಿವಾರ, ಮಧ್ಯಾಹ್ನ 02.00 ರಿಂದ,**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 12.12.2024**
**ಯಾವುದೇ ಸ್ಪರ್ಧಿಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ**

1. **ರಂಗೋಲಿ (ಚುಕ್ಕಿ ರಂಗೋಲಿ) (Powder)**
   ಕಾಲಾವಕಾಶ : 60 ನಿಮಿಷ
   ವಯೋಮಿತಿ : ಎ) 16 ವರ್ಷದ ಒಳಗೆ
   ಬಿ) 16 ವರ್ಷ ಮೇಲ್ಪಟ್ಟು
   * ಸ್ಪರ್ಧಿಗಳ ಸಂಖ್ಯೆ 6 ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

2. **ಚಿತ್ರ ಬಿಡಿಸುವುದು (Drawing)**
   ಕಾಲಾವಕಾಶ : 45 ನಿಮಿಷ
   ವಯೋಮಿತಿ : ಎ) 6 ವರ್ಷದ ಒಳಗೆ
   ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
   ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
   ಡಿ) 16 ವರ್ಷ ಮೇಲ್ಪಟ್ಟು

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 15.12.2024, ಭಾನುವಾರ, ಬೆಳಿಗ್ಗೆ 09.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 13.12.2024, ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕವಿರುವುದಿಲ್ಲ**

**ಛದ್ಮವೇಷ (Fancy Dress)**
ಕಾಲಾವಕಾಶ : 2 ನಿಮಿಷ
ವಯೋಮಿತಿ : ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು
(ಹಿನ್ನೆಲೆ ಧ್ವನಿ/ ಸಂಗೀತವನ್ನು ಪರಿಗಣಿಸಲಾಗುವುದು)

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ರಮೇಶ್ ಜಿ. ಶೆಟ್ಟಿ
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ,
ಬಂಟರ ಸಂಘ ಬೆಂಗಳೂರು

**ಆಶು ಭಾಷಣ (Pick & Speech) – ಕನ್ನಡ / English**

ಕಾಲಾವಕಾಶ : 2 ನಿಮಿಷ

ವಯೋಮಿತಿ : ಎ) 6 ವರ್ಷ ಮೇಲ್ಪಟ್ಟು 10 ವರ್ಷದ ಒಳಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ
ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

**ಸಂಗೀತ (Music)**

**ಎ. ಶಾಸ್ತ್ರೀಯ ಸಂಗೀತ–ಹಿಂದೂಸ್ಥಾನಿ/ಕರ್ನಾಟಕ–ಕಾಲಾವಕಾಶ 3 ನಿಮಿಷ (Shastriya Sangeetha (Hindustani/ Karnatic)**

ವಯೋಮಿತಿ : ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷದ ಮೇಲ್ಪಟ್ಟು

**ಬಿ. ಸುಗಮ ಸಂಗೀತ – ಕಾಲಾವಕಾಶ 2 ½ ನಿಮಿಷ**

**ಸಿ. ಸಿನಿಮಾ ಗೀತೆಗಳು (Film Song)– ಕಾಲಾವಕಾಶ 2½ ನಿಮಿಷ**

ವಯೋಮಿತಿ : ಎ) 6 ರಿಂದ 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 25 ವರ್ಷದವರೆಗೆ
ಡಿ) 25 ವರ್ಷ ಮೇಲ್ಪಟ್ಟು

**ಡಿ. ಸಮೂಹ ಗಾನ (Group Song-Open for all- 3 members & above)
ಕಾಲಾವಕಾಶ –2 ½ ನಿಮಿಷ**

**ವಿಶೇಷ ಮಾಹಿತಿ : ದಿನಾಂಕ 05.01.2025ರ ಭಾನುವಾರದಂದು ಆಯೋಜಿಸಲಾಗಿದ್ದ ಸ್ಪರ್ಧೆಗಳನ್ನು ದಿನಾಂಕ : 15.01.2025 ಬುಧವಾರದಂದು ನಿಗದಿಪಡಿಸಲಾಗಿದೆ.**

**ದಿನಾಂಕ 15.01.2025, ಬುಧವಾರ, ಬೆಳಿಗ್ಗೆ 9.30 ರಿಂದ,**
**ಸ್ಥಳ : ಬಂಟರ ಸಂಘದ ಆವರಣ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 13.01.2025, ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ**

**1. ನೃತ್ಯ (Dance)**

1. ಶಾಸ್ತ್ರೀಯ ನೃತ್ಯ (Indian Classical - Solo)
2. ಜಾನಪದ ನೃತ್ಯ (Folk - Solo)
3. ಫ್ರೀ ಸ್ಟೈಲ್ (Free- Style - Solo)
4. ಸಮೂಹ ನೃತ್ಯ (Group Dance -3 members & above- open)
5. ಜೋಡಿ ನೃತ್ಯ (Male & Female)

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು
SSR CATERERS SINCE 2007
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀ ಸೀತಾ ರಾಮ ಕ್ಯಾಟರ್ರ್ಸ್
ಆರ್.ಆರ್. ನಗರ, ಬೆಂಗಳೂರು
9902990244 | 9902990233

| **ವಯೋಮಿತಿ** | **ಕಾಲಾವಕಾಶ** |
|---|---|
| ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ | 2 + 1 ನಿಮಿಷ |
| ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ | 2 + 1 ನಿಮಿಷ |
| ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ | 2 + 1 ನಿಮಿಷ |
| ಡಿ) 30 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಇ) ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |
| ಎಫ್) ಜೋಡಿ ನೃತ್ಯ (Male & Female) | 2 + 1 ನಿಮಿಷ |
| ಜಿ) ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ | 3 + 1 ನಿಮಿಷ |

**(ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ (Anthakshari – Hindi & Kannada) – ಸಂಜೆ 5.00 ರಿಂದ**

ವಯೋಮಿತಿ : ಮುಕ್ತ (ಪ್ರತೀ ತಂಡಕ್ಕೆ 3 ಸದಸ್ಯರು)

**ಹೆಚ್ಚಿನ ಮಾಹಿತಿಗಾಗಿ ಸಾಂಸ್ಕೃತಿಕ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು**

| | | |
|---|---|---|
| ರಮೇಶ್ ಜಿ. ಶೆಟ್ಟಿ : 9611648717 | ಸಂತೋಷ್ ಶೆಟ್ಟಿ : 9035429265 | ಪ್ರತಿಮ ಶೆಟ್ಟಿ : 9164136726 |
| ಸುಮ ಎನ್. ಶೆಟ್ಟಿ : 9916489042 | ರೇಷ್ಮಾ ಶೆಟ್ಟಿ : 9845563881 | |

**ಸಂಘದ ಕಛೇರಿ: 080–23399323 / 23399636 / 7022119739**

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ.**
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ** ಹಾಗೂ ಸ್ಪರ್ಧೆಯ ದಿನದಂದು ಯಾವುದೇ ರೀತಿಯ ನೋಂದಾವಣೆ ಇರುವುದಿಲ್ಲ. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.
- ಯಾವುದೇ ಸ್ಪರ್ಧೆಯಲ್ಲಿ ಮೂರು ಸ್ಪರ್ಧಿಗಳು ಮತ್ತು ಅದಕ್ಕಿಂತ ಕಮ್ಮಿ ಇದ್ದರೆ ಒಂದು ಬಹುಮಾನ, ಮೂರರಿಂದ ಆರು ಸ್ಪರ್ಧಿಗಳು ಭಾಗವಹಿಸಿದ್ದಲ್ಲಿ ಕೇವಲ ಎರಡು ಬಹುಮಾನಗಳು ಮತ್ತು ಆರಕ್ಕಿಂತ ಹೆಚ್ಚು ಸ್ಪರ್ಧಿಗಳು ಇದ್ದಲ್ಲಿ ಮೂರು ಬಹುಮಾನ ನೀಡಲಾಗುವುದು.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸಂತೋಷ್ ಶೆಟ್ಟಿ, ತಲೇಕಳ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ
ಮೊ: 9035429265

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ
ಮೊ: 9611648717

**ವರ್ಣರಂಜಿತ ಸ್ನೇಹ ಚಿಂತನೆ ಮಾಸ ಪತ್ರಿಕೆಗೆ ಶುಭಕೋರುವವರು**



ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಎಂ
ಚೇರ್‌ಪರ್ಸನ್, ಯಕ್ಷಗಾನ ಮತ್ತು ರಂಗ ತರಬೇತಿ ಸಮಿತಿ, ಬಂಟರ ಸಂಘ ಬೆಂಗಳೂರು

ಬಂಟರ ಸಂಘ ಬೆಂಗಳೂರು

# ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2024–25

**ಅತ್ಮೀಯ ಸದಸ್ಯರೇ,**

2024–25ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

**ಸೂಚನೆ: ನಿಮಗೆಲ್ಲಾ ತಿಳಿದಿರುವಂತೆ, ಮಳೆಯ ಕಾರಣದಿಂದ ದಿನಾಂಕ 20.10.2024ರಂದು ನಡೆಯಬೇಕಿದ್ದ ಅಥ್ಲೆಟಿಕ್ಸ್ ಕಾರ್ಯಕ್ರಮವು ರದ್ದುಗೊಂಡಿದ್ದು, ಕಾರ್ಯಕ್ರಮದ ಹೊಸ ವೇಳಾಪಟ್ಟಿ ಈ ಕೆಳಗಿನಂತಿದೆ.**

**ಕ್ರೀಡಾಕೂಟದ ವಿವರ**

| | | | |
|---|---|---|---|
| ನವೆಂಬರ್ 17 ಭಾನುವಾರ | ಕ್ರೀಡಾಜ್ಯೋತಿ, ಉದ್ಘಾಟನೆ ಮತ್ತು ಅಥ್ಲೆಟಿಕ್ಸ್ | ಬೆಳಿಗ್ಗೆ 8.30ಕ್ಕೆ | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II, ಯಲಚಗುಪ್ಪೆ |
| ನವೆಂಬರ್24 ಭಾನುವಾರ | ಥ್ರೋಬಾಲ್ | ಬೆಳಿಗ್ಗೆ 9.00ಕ್ಕೆ | ದಿ. ಅನಂತ್ ಕುಮಾರ್ ಕ್ರೀಡಾಂಗಣ, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು–560076 |
| ಡಿಸೆಂಬರ್ 1 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ | ಅಕ್ಷಯ ಸ್ಪೋರ್ಟ್ಸ್ ಅಕಾಡೆಮಿ ಪಾಪರೆಡ್ಡಿಪಾಳ್ಯ, ನಾಗರಬಾವಿ |
| ಡಿಸೆಂಬರ್ 8 ಭಾನುವಾರ | ಚೆಸ್, ಕೇರಂ, ಟೆನ್ನಿಕ್ವಾಟ್ ಮತ್ತು ಟೇಬಲ್ ಟೆನ್ನಿಸ್ ಹಾಗೂ ವಾಲಿಬಾಲ್ | ಬೆಳಿಗ್ಗೆ 9.00ಕ್ಕೆ | ಬಂಟರ ಸಂಘದ ಸಂಕೀರ್ಣ |
| ಜನವರಿ 4 ಮತ್ತು 5 ಶನಿವಾರ ಮತ್ತು ಭಾನುವಾರ | ಪುರುಷರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ | ಯು.ಜಿ.ಪಿ.ಇ. (ಯೂನಿವರ್ಸಿಟಿ ಗ್ರೌಂಡ್ ಫಿಸಿಕಲ್ ಎಜುಕೇಶನ್), ಜ್ಞಾನ ಭಾರತಿ ನಗರ, ಜ್ಞಾನಭಾರತಿ, ಬೆಂಗಳೂರು–560056 |
| ಜನವರಿ 5 ಭಾನುವಾರ | ಮಹಿಳೆಯರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ | ಯು.ಜಿ.ಪಿ.ಇ. (ಯೂನಿವರ್ಸಿಟಿ ಗ್ರೌಂಡ್ ಫಿಸಿಕಲ್ ಎಜುಕೇಶನ್, ಜ್ಞಾನ ಭಾರತಿ ನಗರ, ಜ್ಞಾನಭಾರತಿ, ಬೆಂಗಳೂರು–560056 |


ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀಮತಿ ಶಕುಂತಲ ಶೆಟ್ಟಿ
ಚೇರ್‌ಪರ್ಸನ್, ಕಾನೂನು ವಿಭಾಗ
ಬಂಟರ ಸಂಘ ಬೆಂಗಳೂರು

ಬೆಂಗಳೂರು ಬಂಟರ ಸಂಘದ 2024–25ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ, ಮೊ: 97409 23868

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ, ಮೊ: 9620386172

- ಶಟಲ್ ಬ್ಯಾಡ್ಮಿಂಟನ್ ಗೆ ನೊಂದಾಯಿಸಲು ಕೊನೆಯ ದಿನಾಂಕ: 29.11.2024ನೇ ಶುಕ್ರವಾರ ಸಂಜೆ 6.00ರ ಒಳಗೆ .
- ಥ್ರೋಬಾಲ್ ಪಂದ್ಯಾವಳಿಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 22.11.2024ನೇ ಶುಕ್ರವಾರ ಸಂಜೆ 6.00ರ ಒಳಗೆ.
- ವಾಲಿಬಾಲ್ ಪಂದ್ಯಾವಳಿಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 29.11.2024ನೇ ಶುಕ್ರವಾರ ಸಂಜೆ 6.00ರ ಒಳಗೆ.
- ಮಹಿಳಾ ಮತ್ತು ಪುರುಷರ ಕ್ರಿಕೆಟ್ ಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 15.12.2024ನೇ ಭಾನುವಾರ ಸಂಜೆ 6.00ರ ಒಳಗೆ.

**ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.**

| | | | | | |
|---|---|---|---|---|---|
| ಸುಚಿನ್ ಶೆಟ್ಟಿ | 8904378046 | ಶರತ್ ಶೆಟ್ಟಿ | 9591295959 | ರವೀಂದ್ರ ಶೆಟ್ಟಿ | 9535655822 |
| ಸುಜೇಂದ್ರ ಕುಮಾರ್ ಶೆಟ್ಟಿ | 9844444046 | ಅಶ್ವಿನಿ ಶೆಟ್ಟಿ | 7795199583 | ನವೀನ್ ಶೆಟ್ಟಿ | 9844226700 |
| ಅಶೋಕ್ ಶೆಟ್ಟಿ | 9880420959 | ನಿತಿನ್ ಶೆಟ್ಟಿ | 9964768678 | ಸಚಿನ್ ಶೆಟ್ಟಿ | 9880982967 |
| ಮನೋಜ್ ಶೆಟ್ಟಿ | 9902789251 | ಹರೀಶ್ ಶೆಟ್ಟಿ | 9740002710 | ಶಶಿರಾಜ್ ಶೆಟ್ಟಿ | 9611981263 |
| ನಿತಿನ್ ಶೆಟ್ಟಿ | 9071121952 | ಅಜಿತ್ ಶೆಟ್ಟಿ | 9741077729 | ನಾಗರಾಜ್ ಶೆಟ್ಟಿ | 9663828719 |
| ಶರಣು ಕುಮಾರ್ ಶೆಟ್ಟಿ | 9663899206 | ಗಣೇಶ್ ಶೆಟ್ಟಿ | 9068995720 | ಸುಮಂತ್ ಶೆಟ್ಟಿ | 9591066094 |
| ಸುಭಾಷ್ ಶೆಟ್ಟಿ | 9972283789 | ರಘುರಾಮ್ ಶೆಟ್ಟಿ | 8050776115 | | |

## ಅಥ್ಲೆಟಿಕ್ಸ್

| | |
|---|---|
| ಸ್ಥಳ | : ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II, ಯಲಚಗುಪ್ಪೆ |
| ದಿನಾಂಕ | : 17.11.2024, ಭಾನುವಾರ, ಬೆಳಿಗ್ಗೆ 8.30ಕ್ಕೆ |
| ಪ್ರವೇಶ ಶುಲ್ಕ | : ರೂ. 50/– ಪ್ರತಿ ಸ್ಪರ್ಧೆಗೆ |


ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀಮತಿ ಶೋಭಾ ಶೇಖ
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ
ಬಂಟರ ಸಂಘ ಬೆಂಗಳೂರು

| ವಯೋಮಿತಿ | ವಯೋಮಿತಿ |
|---|---|
| **6 ವರ್ಷದಿಂದ ಕೆಳಗಿನವರಿಗೆ** : 50 ಮೀಟರ್ ಓಟ<br>(ಪ್ರವೇಶ ಶುಲ್ಕ ಇರುವುದಿಲ್ಲ) ಕಪ್ಪೆ ಜಿಗಿತ (Frog Jump)<br>ಚಾಕೋಲೇಟ್ ಸಂಗ್ರಹ | **36 ರಿಂದ 47 ವರ್ಷ**<br>**(ಮಹಿಳೆಯರಿಗೆ** ):400 ಮೀಟರ್ ಓಟ ಲೆಮನ್ ಮತ್ತು ಸ್ಪೂನ್ ಸ್ಪರ್ಧೆ ಗುಂಡು ಎಸೆತ (Shot Put) |
| **6 ರಿಂದ 12 ವರ್ಷ** : 100 ಮೀಟರ್ ಓಟ<br>(ಪ್ರವೇಶ ಶುಲ್ಕ ಇರುವುದಿಲ್ಲ) 50 ಮೀಟರ್ ಓಟ<br>ಪೊಟ್ಯಾಟೋ ಓಟ | **47 ರಿಂದ 60 ವರ್ಷ** : 400 ಮೀಟರ್ ಓಟ<br>**(ಪುರುಷರಿಗೆ)** ಗುಂಡು ಎಸೆತ (Shot Put)<br>**ಮಹಿಳೆಯರಿಗೆ** : 400 ಮೀಟರ್ ಓಟ<br>'ಬಾಲ್‌ತ್ರೋ' ಲೆಮನ್ ಮತ್ತು ಸ್ಪೂನ್ ಸ್ಪರ್ಧೆ |
| **12 ರಿಂದ 18 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ 400 ಮೀಟರ್ ಓಟ<br>ಉದ್ದ ಜಿಗಿತ (Long Jump) ಗುಂಡು ಎಸೆತ (Shot Put) | |
| **18 ರಿಂದ 26 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ 400 ಮೀಟರ್ ಓಟ<br>ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | **60ವರ್ಷ ಮೇಲಿನವರಿಗೆ (ಪುರುಷರಿಗೆ)** :<br>400 ಮೀಟರ್ ಓಟ / ನಡಿಗೆ (ಪ್ರವೇಶ ಶುಲ್ಕ ಇರುವುದಿಲ್ಲ) 'ಬಾಲ್‌ತ್ರೋ'<br>**ಮಹಿಳೆಯರಿಗೆ** : 400 ಮೀಟರ್ ಓಟ 'ಬಾಲ್‌ತ್ರೋ' |
| **26 ರಿಂದ 36 ವರ್ಷ** : 100 ಮೀಟರ್ ಓಟ<br>200 ಮೀಟರ್ ಓಟ 400 ಮೀಟರ್ ಓಟ<br>ಗುಂಡು ಎಸೆತ (Shot Put) ಉದ್ದ ಜಿಗಿತ (Long Jump) | 4 x 100 ಮೀಟರ್ ರಿಲೇ :<br>**ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ**<br>18 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| **36 ರಿಂದ 47 ವರ್ಷ** : 100 ಮೀಟರ್ ಓಟ<br>(ಪುರುಷರಿಗೆ) 200 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put) | **ಹಗ್ಗ ಜಗ್ಗಾಟ** : ಮಹಿಳೆಯರಿಗೆ ಹಾಗೂ ಪುರುಷರಿಗೆ (Tug of War) 16 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| | Fun Games : ಎಲ್ಲಾ ವಯೋಮಿತಿ (ಸಮಯವಿದ್ದರೆ ಮಾತ್ರ) |

**ವಿ.ಸೂ:- ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯವಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ನೀಡತಕ್ಕದ್ದು. ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.**

**ಸೂಚನೆ** :

1. ಎಲ್ಲಾ ಸ್ಪರ್ಧಿಗಳೂ, ಸ್ಪರ್ಧೆಗೆ ಒಂದು ಗಂಟೆ ಮುಂಚಿತವಾಗಿ ಸ್ಥಳದಲ್ಲಿ ಹಾಜರಿದ್ದು, ಶುಲ್ಕ ನೀಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.
2. ಸ್ಪರ್ಧಾಳುಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು. ಅಗತ್ಯವಿದ್ದಲ್ಲಿ ಜನನ ಪ್ರಮಾಣ ಪತ್ರದ / ದಾಖಲೆಯ ಪ್ರತಿಯನ್ನು ತೋರಿಸತಕ್ಕದ್ದು.


ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ
ಚೇರ್‌ಪರ್ಸನ್, ಖರೀದಿ ಸಮಿತಿ
ಬಂಟರ ಸಂಘ ಬೆಂಗಳೂರು

3. ಪ್ರತಿಯೊಂದು ಸ್ಪರ್ಧೆಗೂ ಕನಿಷ್ಠ 4 ಸ್ಪರ್ಧಿಗಳು ಇರಲೇಬೇಕು.
4. ಎಲ್ಲಾ ವಯೋಮಿತಿಯಲ್ಲೂ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.
5. 12 ವರ್ಷ ವಯೋಮಿತಿಯ ಕೆಳಗೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಪ್ರವೇಶ ಶುಲ್ಕ ಇರುವುದಿಲ್ಲ.
6. ಭಾಗವಹಿಸುವ ಎಲ್ಲಾ ಸ್ಪರ್ಧಿಗಳು ಶೂ ಧರಿಸಬೇಕಾಗಿ ವಿನಂತಿ.
7. ಎಲ್ಲಾ ಕ್ರೀಡೆಗಳಿಗೂ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಸ್ಥಳದಲ್ಲಿ ಪ್ರವೇಶವನ್ನು ಸ್ವೀಕರಿಸಲಾಗುವುದು (Spot Entry accepted)

## ಥ್ರೋಬಾಲ್ : ಮಹಿಳೆಯರಿಗೆ

ಸ್ಥಳ : ದಿ. ಅನಂತ್ ಕುಮಾರ್ ಕ್ರೀಡಾಂಗಣ, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು–560076

ದಿನಾಂಕ : 24.11.2024ನೇ ಭಾನುವಾರ, ಬೆಳಿಗ್ಗೆ 09.00ಕ್ಕೆ.

ಪ್ರವೇಶ ಶುಲ್ಕ : ಪ್ರತಿ ತಂಡಕ್ಕೆ ರೂ.1500/–

ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 22.11.2024ನೇ ಶುಕ್ರವಾರ ಸಂಜೆ 6.00 ರ ಒಳಗೆ

ಸ್ಪರ್ಧೆಯ ಡ್ರಾ ನಿಗದಿಯನ್ನು 22.11.2024ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು.

**ಪಂದ್ಯದ ನಿಯಮಗಳು**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಒಟ್ಟು 7+3 ಆಟಗಾರರು ಮಾತ್ರ ಇರುತ್ತಾರೆ.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು.

ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

## ಶಟಲ್ ಬ್ಯಾಡ್ಮಿಂಟನ್

ಸ್ಥಳ : ಅಕ್ಷಯ ಸ್ಪೋರ್ಟ್ಸ್ ಅಕಾಡೆಮಿ, ಪಾಪರೆಡ್ಡಿಪಾಳ್ಯ, ನಾಗರಬಾವಿ

ದಿನಾಂಕ : 01.12.2024, ಭಾನುವಾರ, ಬೆಳಿಗ್ಗೆ 8.30ಕ್ಕೆ

ಪ್ರವೇಶ ಶುಲ್ಕ : ರೂ. 200/– ಸಿಂಗಲ್ಸ್ ಗೆ ಮತ್ತು ರೂ. 300/– ಡಬಲ್ಸ್ ಗೆ

ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 29.11.2024 ನೇ ಶುಕ್ರವಾರ ಸಂಜೆ 6.00ಕ್ಕೆ.

ಸ್ಪರ್ಧೆಯ ಡ್ರಾ ನಿಗದಿಯನ್ನು 29.11.2024ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು.

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀ ಉಮೇಶ್ ಕುಮಾರ್ ಶೆಟ್ಟಿ
ಚೇರ್‌ಪರ್ಸನ್, ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ, ಬಂಟರ ಸಂಘ ಬೆಂಗಳೂರು

**ವಯೋಮಿತಿ**

15 ವರ್ಷದ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
15–32 ವರ್ಷ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
32–50 ವರ್ಷ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
50 ವರ್ಷ ಮೇಲ್ಪಟ್ಟು : ಸಿಂಗಲ್ಸ್ / ಡಬಲ್ಸ್
ಮಿಕ್ಸ್‌ಡ್ ಡಬಲ್ಸ್ : ಎಲ್ಲಾ ವಯೋಮಿತಿಯವರಿಗೂ ಮುಕ್ತ (Open for all age groups)

**ಪಂದ್ಯದ ನಿಯಮ:**

01. ಎಲ್ಲಾ ವಯೋಮಿತಿಯ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ.
02. ಪ್ರತಿ ವಯೋಮಿತಿಯಲ್ಲೂ ಕನಿಷ್ಠ 4 ಸ್ಪರ್ಧಿ / ತಂಡಗಳ ಪ್ರವೇಶ ಇರಲೇಬೇಕು.
03. ಪ್ರತಿಯೊಬ್ಬ ಸ್ಪರ್ಧಿಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು/ ಅಗತ್ಯವಿದ್ದಲ್ಲಿ ಜನನ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
04. ಕಡ್ಡಾಯವಾಗಿ ಸ್ಥಳದಲ್ಲಿ ಯಾವುದೇ ಪ್ರವೇಶವನ್ನು ಸ್ವೀಕರಿಸಲಾಗುವುದಿಲ್ಲ (No Spot Entry).
05. ಹೆಸರು ನಮೂದಿಸುವಾಗ ಕಡ್ಡಾಯವಾಗಿ ಸದಸ್ಯತ್ವ ಸಂಖ್ಯೆಯನ್ನು ಕೊಡತಕ್ಕದ್ದು.
06. ಡಬಲ್ಸ್ & ಮಿಕ್ಸಡ್ ಡಬಲ್ಸ್ ಸ್ಪರ್ಧೆಗೆ ಸಂಪೂರ್ಣ ತಂಡದ ವಿವರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಕೊಡಬೇಕು.

---

## ವಾಲಿಬಾಲ್ : ಪುರುಷರಿಗೆ

ದಿನಾಂಕ : 08.12.2024, ಭಾನುವಾರ, ಬೆಳಿಗ್ಗೆ 9.00ಕ್ಕೆ
ಸ್ಥಳ : ಬಂಟರ ಸಂಘದ ಸಂಕೀರ್ಣ
ಪ್ರವೇಶ ಶುಲ್ಕ : ರೂ. 100/– ಪ್ರತಿ ಸ್ಪರ್ಧೆಗೆ

ವಾಲಿಬಾಲ್‌ಗೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 06.12.2024ನೇ ಶುಕ್ರವಾರ ಸಂಜೆ 6.00 ರ ಒಳಗೆ
ವಾಲಿಬಾಲ್ ಪ್ರವೇಶ ಶುಲ್ಕ: ರೂ. 5000 ಪ್ರತಿ ತಂಡಕ್ಕೆ.
ಸ್ಪರ್ಧೆಯ ಡ್ರಾ ನಿಗದಿಯನ್ನು 06.12.2024ನೇ ಶುಕ್ರವಾರದಂದು ತಿಳಿಸಲಾಗುವುದು ಅಥವಾ ಸಂಘದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದು

**ವಾಲಿಬಾಲ್ ಪಂದ್ಯದ ನಿಯಮ:**

1. ಒಂದು ತಂಡದಲ್ಲಿ ವಿಶ್ವವಿದ್ಯಾಲಯ, ರಾಜ್ಯಮಟ್ಟ ಹಾಗೂ ಮೇಲ್ಪಟ್ಟು ಪ್ರತಿನಿಧಿಸಿರುವ ಎರಡು ಆಟಗಾರರಿಗೆ ಮಾತ್ರ ಅವಕಾಶ.
2. ಒಂದು ತಂಡದಲ್ಲಿ ಒಟ್ಟು 9 ಆಟಗಾರರು (6+3) ಮಾತ್ರ ಭಾಗವಹಿಸಬಹುದಾಗಿದೆ.
3. ಒಬ್ಬ ಆಟಗಾರನಿಗೆ ಒಂದು ತಂಡದಲ್ಲಿ ಮಾತ್ರ ಆಡಲು ಅವಕಾಶ
4. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯವಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು

ವರ್ಣರಂಜಿತ
ಸ್ನೇಹ ಚಿಂತನೆ ಮಾಸ ಪತ್ರಿಕೆಗೆ
ಶುಭಕೋರುವವರು



ಶ್ರೀಮತಿ ಯೋಗ್ಯ ಎಲ್ ರೈ
ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ
ಬಂಟರ ಸಂಘ ಬೆಂಗಳೂರು

5. ತಂಡದಲ್ಲಿ ಸಂಘದ ಸದಸ್ಯೇತರ ಆಟಗಾರರು ಕಂಡು ಬಂದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಂಡವನ್ನು ಅನರ್ಹಗೊಳಿಸಲಾಗುವುದು ಹಾಗೂ ಅನರ್ಹಗೊಂಡ ತಂಡದ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ
6. ಅಂಪೈರ್ ಹಾಗೂ ಕ್ರೀಡಾ ಸಮಿತಿಯ ತೀರ್ಮಾನವೇ ಅಂತಿಮ
7. ಪಂದ್ಯಾವಳಿ ನಡೆಸಲು ಕನಿಷ್ಠ 4 ತಂಡಗಳು ಇದ್ದಲ್ಲಿ ಮಾತ್ರ ನಡೆಸಲಾಗುವುದು
8. ತಂಡಗಳ ಹೆಸರುಗಳನ್ನು ನೊಂದಾಯಿಸಿಕೊಳ್ಳಲು ಕೊನೆಯ ದಿನಾಂಕ 06.12.2024 ಸಂಜೆ 6.00ರ ತನಕ ಇದ್ದು ನಿಗದಿತ ಅರ್ಜಿ ನಮೂನೆ ಮತ್ತು ಪ್ರವೇಶ ಶುಲ್ಕದೊಂದಿಗೆ ಕೊಡುವುದು.
9. ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

---

## ಚೆಸ್, ಕೇರಂ (ಡಬಲ್ಸ್) ಟೆನ್ನಿಕ್ವಾಟ್

ಸ್ಥಳ : ಬಂಟರ ಸಂಘ ಸಂಕೀರ್ಣ

ದಿನಾಂಕ : 08.12.2024, ಭಾನುವಾರ, ಬೆಳಿಗ್ಗೆ 9.00ಕ್ಕೆ

ಪ್ರವೇಶ ಶುಲ್ಕ : ರೂ. 100/– ಪ್ರತಿ ಸ್ಪರ್ಧೆಗೆ

ವಿ.ಸೂ.: ಚೆಸ್ ಸ್ಪರ್ಧೆಯು 18 ವರ್ಷಕ್ಕಿಂತ ಮೇಲಿನವರಿಗೆ ಮತ್ತು ಕೆಳಗಿನವರಿಗೆ ಪ್ರತ್ಯೇಕವಾಗಿ ಇರುತ್ತದೆ.

